ಇದನ್ನು ಅಪೇಕ್ಷಿಸುತ್ತಲೇ ಇದ್ದೆನೋ? ಸುರಕ್ಷತೆಯ ಅಲಾರಾಮ್ ಏನಾಯ್ತು? ಬಹಳ ಸಮಯದಿಂದ ಶಬ್ದವೇ ಇಲ್ಲ.

"ಮ್, ಬೈ..."

"ಫರ್ ನೌ..."

ನಕ್ಕು ನಡೆದೆ. ಕಾಫೀ ಕುಡಿಯಲು ಒಪ್ಪಿಕೊಂಡು ಬಂದನೇ? ಇಲ್ಲ, ಆ ಕ್ಷಣಕ್ಕೆ ಓಕೇ ಹೇಳಿ ಕಳಚಿಕೊಳ್ಳುವ ಐಡಿಯಾನೇ ಎಂದು ಗುಬ್ಬಚ್ಚಿ ಮೆದುಳನ್ನು ತಟ್ಟಿ ಎಬ್ಬಿಸಿದೆ. 'ಕಾಫೀ ತಾನೇ... ಕೊಡಿಸಿದರಾಯ್ತು' ಎಂದು ಗ್ರೀನ್ ಸಿಗ್ನಲ್ ಕೊಟ್ಟು ಮತ್ತೆ ಕಾಣೆಯಾಯಿತು.

'ಇವನಿಗೆ ಕಾಫೀ ಶಾಪಿನಲ್ಲಿಯೇ ಕೆಲಸವೋ? ಇಲ್ಲ ನನಗಾಗಿಯೇ ಕಾಯುತ್ತಿದ್ದನೋ? ಕಾಫೀ ಯಾವಾಗ ಕುಡಿಯೋದು? ಕಾಫೀ ಶಾಪಿನಲ್ಲಿ ಮತ್ತೆ ಕಾಯುತ್ತಿರುತ್ತಾನೆಯೇ?...' ಎಷ್ಟೊಂದು ಪ್ರಶ್ನೆಗಳು! ಬ್ಯಾಂಕಿನಲ್ಲಿ ಲೋನ್ ತೆಗೆದುಕೊಂಡು ಕಾಫಿ ಕುಡಿದಂತೆ, ಒಂದೇ ಒಂದು ಕಾಫೀ ಸಾಲ ತಲೆಯನ್ನು ಕೊರೆಯಿತು. ಲಂಚ್ ಬ್ರೇಕಿನಲ್ಲೇ ಕುಡಿದುಬಿಟ್ಟರೆ ಒಳಿತು ಎಂದು ತೋಚಿತು. ಒಂದು 'ಕೆಲಸ' ಮುಗಿಸಿದ ತೃಪ್ತಿಯಲ್ಲಿ ಮೆದುಳು ಫ್ರೀಯಾಗಿ, ಮಧ್ಯಾಹ್ನದ ಸೆಮಿನಾರನ್ನು ಶಿಸ್ತಿನಿಂದ ಗಮನಿಸಬಹುದು.

ಮಧ್ಯಾಹ್ನ ಒಂದು ಗಂಟೆಗೆ ಲಂಚ್ ಬ್ರೇಕ್. ಬಫೆ ಲಂಚನ್ನು ಮೇಯ್ದು, ಹಾಲಿನ ಹೊರಗೆ ಬಂದೆ. 'ಅವನಿಗೂ ಲಂಚ್ ಬ್ರೇಕೋ?' ಲಾಬಿಯಲ್ಲಿದ್ದ ಗುಂಪಿನ ಮೇಲೆ ಕಣ್ಣು ಹಾಯಿತು. ಕಾಣಲಿಲ್ಲ. 'ಯಾತಕ್ಕಾಗಿ ಅವನನ್ನು ಹುಡುಕುತ್ತಿದ್ದೇನೆ? ಓ ಕಾಫಿಗೆ ಹಣ ಕೊಡಬೇಕು. ಅಥವಾ ಕಾಫಿಯನ್ನೇ ಕೊಡಿಸಬೇಕು.' ಒಮ್ಮೆ ಮನಸ್ಸಿನಲ್ಲಿಯೇ ಹೇಳಿಕೊಂಡೆ. 'ಕಾಫೀ ಶಾಪಿನಲ್ಲಿರುವನೋ?' ಒಂದು ಹೆಜ್ಜೆ ಹೋಗಿ ನೋಡಿ ಬರುವ.

ಕಾಣಲಿಲ್ಲ. 'ಹೊರಟುಹೋದನೇ?'

ತಳಮಳದಿಂದ ಉಳಿದ ಸೆಮಿನಾರನ್ನು ಶ್ರದ್ಧೆಯಿಂದ ಕೇಳಲಾಗಲಿಲ್ಲ. ಸ್ಕೂಲಿನಲ್ಲಿ ಓದುವಾಗ 'ರೋಜಾ' ಸಿನಿಮಾ ನೋಡಿ, ಮಾರನೆಯ ದಿನ ಯಾವ ತರಗತಿಯನ್ನು ಗಮನಿಸಲಾಗದೆ ಒದ್ದಾಡಿದ್ದು ನೆನಪಾಯಿತು.

'ನಾನಿನ್ನೂ ಬೆಳೆಯಲೇ ಇಲ್ಲವೇ?'

ಸೆಮಿನಾರ್ ಮುಗಿಸಿ ಹೊರಬರಲು ಸಂಜೆ ನಾಲ್ಕು ಗಂಟೆ ಆಯಿತು. ಗುರುತಿದ್ದವರಿಗೆಲ್ಲಾ 'ಬೈ' ಹೇಳಿ ಹೊರಡಲು ಮತ್ತೆ ಅರ್ಧ ಗಂಟೆ ಹಿಡಿಯಿತು. ಯಾರಾದರೂ ನಾಳೆ ಆಫೀಸಿನಲ್ಲಿ ಸೆಮಿನಾರ್ ಬಗ್ಗೆ ಕೇಳಿದರೆ, ಬಹುಶಃ ಕಾಫಿಯ ಬಗ್ಗೆ ಕ್ಲಾಸ್ ತೆಗೆದುಕೊಳ್ಳುವೆ.

ಹೊರಗೆ ಬಂದ ಮೇಲೆ ಮತ್ತೆ ಅವನನ್ನು ಹುಡುಕಿದೆ. 'ಇನ್ನೂ ಅವನ ಸೆಮಿನಾರ್ ಮುಗಿಯಲಿಲ್ಲವೇ?' ಕಾಫೀ ಶಾಪಿನಲ್ಲಿ ಕಡಿಮೆ ಜನ. ಸಾಲಗಾರನನ್ನು ಕಾಣಲಿಲ್ಲ. 'ವೆಯ್ಟ್ ಮಾಡಲೇ?' ಬೇಡ.

ಲಿಫ್ಟ್‌ನಿಂದ ಇಳಿದು ಬಂದು ರಿಸೆಪ್ಷನ್ ಲಾಬಿಯನ್ನು ದಾಟಿ ಬಂದೆ. ಬೆಳಗ್ಗೆ ಕುಡಿದ ಕಳಪೆ ಪುಕ್ಕಟೆ ಕಾಫೀ ಗಂಟಲಲ್ಲಿ ಕಹಿಯಾಗಿತ್ತು. ಅವನನ್ನು ಕಾಣದೆ ಹೋಟೆಲಿನಿಂದ ಹೊರಟಿದ್ದರಿಂದ ಸ್ವಲ್ಪ ನಿರಾಶೆಯಾಗಿತ್ತು. ರಿಸೆಪ್ಷನ್ ಲಾಬಿಯಲ್ಲಿ ಅವನಂತೆಯೇ ಯಾರೋ ಒಬ್ಬ ವಯಸ್ಸಾದ ಆಸಾಮಿಯೊಂದಿಗೆ ಏನನ್ನೋ ಮಾತನಾಡುತ್ತಿದ್ದ. 'ಭ್ರಮೆಯೇ?'

ಕಾರಿಗಾಗಿ ಹೊರಗೆ ಕಾಯುತ್ತಿದ್ದಾಗ "ಹೀಗೆ ಎಸ್ಕೇಪ್ ಆಗಬಾರದು" ಎಂಬ ದನಿ ಕೇಳಿ ಗಾಬರಿಯಿಂದ ಹಿಂತಿರುಗಿದರೆ, ಅದೇ ಆಕರ್ಷಕ ನಗುವಿನೊಂದಿಗೆ ಕಾಫೀ ಸಾಲಗಾರ.